# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 03 / 2022

ಸಿಡಬ್ಲ್ಯೂ- 4
ಪಿಡಬ್ಲ್ಯೂ- 2

ದಿನಾಂಕಃ **04.09.2025.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರುಃ | - | ರಾಜಕುಮಾರ |
| ತಂದೆಯ ಹೆಸರುಃ | - | ನಾಗಪ್ಪ |
| ವಯಸ್ಸುಃ | -? | **43** ವರ್ಷ |
| ಉದ್ಯೋಗಃ | - | ಏನು ಇಲ್ಲ. |
| ವಾಸಸ್ಥಳಃ | - | ಯಲಸತ್ತಿ ಗ್ರಾಮ. |

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ಸಾಕ್ಷಿಯು ತಾನು ಸಹಿ ಮಾಡಿದ ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಅಪಘಾತ ಸ್ಥಳದ ಪಂಚನಾಮೆಯಾಗಿರುತ್ತದೆ ಅದನ್ನು ನಿಪಿ 8 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 8(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪೊಟೋದಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 9 ಎಂದು ಗುರುತಿಸಲಾಯಿತು. 2021 ರಲ್ಲಿ ನಾನು ಗಂಜ್ ನಲ್ಲಿ ಸಹಿ ಮಾಡಿರುತ್ತೇನೆ. ಅಪಘಾತ ಆದ ಕುರಿತು ನಿಪಿ 8 ರ ಮೇಲೆ ನಾನು ಸಹಿ ಮಾಡಿದ್ದೆ. ಅಪಘಾತ ಸ್ಥಳವನ್ನು ಯಾರು ತೋರಿಸಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ 9 ನ್ನು ಅಪಘಾತ ಸ್ಥಳದಲ್ಲಿ ತಯಾರಿಸಿದ್ದರು.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಬಿ.ಬಿ.ಕೆ. ರವರಿಂದಃ

ನಾನು ಯಲಸತ್ತಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ಆ ದಿನ ನನ್ನನೂರಿನಿಂದ ಸಾಯಂಕಾಲ ಯಾದಗಿರಿಗೆ ಬಂದಿದ್ದೆ. ಅದೇ ರೀತಿ ಚಾಸಾ-5 ರವರು ಯಾದಗಿರಿಯವರು ಇರುತ್ತಾರೆ. ಚಾಸಾ-5 ರವರು ಸ್ಟೇಷನ್ ಏರಿಯಾದಲ್ಲಿ ವಾಸವಾಗಿರುತ್ತಾರೆ. ಮೃತ ವ್ಯಕ್ತಿಯು ನನ್ನ ಗೆಳೆಯ ಅಕ್ಕನ ಗಂಡನಾಗುತ್ತಾನೆ. ನಾನು ಹಾಗೂ ನನ್ನ ಗೆಳೆಯನಾದ ನಂದೇಶ್ ಕೂಡಿ ಅಪಘಾತ ಸ್ಥಳಕ್ಕೆ ಹೋಗಿದ್ದೇವು. ನಾವು ಅಪಘಾತ ಸ್ಥಳಕ್ಕೆ ಬಂದಾಗ ಅಲ್ಲಿ ಸಾಕಷ್ಟು ಜನರು ಇದ್ದರು. ನನ್ನ ಗೆಳೆಯನಾದ ನಂದೇಶ್ ಇತನ್ನು ಸಹಿ ಮಾಡು ಎಂದು ಹೇಳಿದ ಕಾರಣ ನಾನು ಸಹಿ ಮಾಡಿದ್ದೆ. ನಿಪಿ 8 ರಲ್ಲಿ

ಬರೆದಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ. ನನ್ನ ಗೆಳೆಯನ್ನು ಸಹಿ ಮಾಡು ಎಂದು ಹೇಳಿದ ಕಾರಣ ನಾನು ಸಹಿ ಮಾಡಿದ್ದೆ. ನನಗೆ ನನ್ನ ಗೆಳೆಯನೇ ಪೋನ್ ಮಾಡಿ ಇವತ್ತು ಬರಲು ತಿಳಿಸಿದ್ದನ್ನು ಎಂದರೆ ಸರಿಯಲ್ಲ. ಪೊಲೀಸ್ ಠಾಣೆಗೆ ನಾನು ಆವಾಗ ಆವಾಗ ಹೋಗುತ್ತಿದ್ದಾಗ ಪೋಲೀಸರು ನನಗೆ ಪೋನ್ ಮಾಡಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತ ಸ್ಥಳದ ಪಂಚನಾಮೆಯನ್ನು ನನ್ನ ಸಮಕ್ಷಮ ಮಾಡಿರುವುದಿಲ್ಲ ಕೇವಲ ಪೋಟೋವನುನ ತೆಗೆದಿರುತ್ತಾರೆ. ನನ್ನ ಗೆಳೆಯನ ಮಾತನ್ನು ಕೇಳಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.